# ಮಾಸದಿರಲಿ ಬಣ್ಣ



ರಂಗಿನ ಜಗತ್ತು ಮರುಳಾಗಿದೆ
ಬಣ್ಣದ ಕೊಡೆಗಳ ನೋಡಿ
ಆಹಾ! ಇದೆಂಥ ಮೋಡಿ
ಬಣ್ಣ ಮಾಸದಿರಬೇಕು
ಬಿಕರಿಯಾಗುವವರೆಗೆ

ಮಳೆಹನಿ ಬೀಳದಂತೆ
ತಡೆದಿದೆ ಕಪ್ಪುಕೊಡೆ
ಮಕ್ಕಳಿಗೆ ಶೀತವಾದೀತೆಂದು
ನೆರಳು ನೀಡುವ ಅಪ್ಪನಂತೆ

ಒಂದೊಂದಾಗಿ ಮಾರಾಟವಾಗುವವು
ಬಣ್ಣದ ಕೊಡೆಗಳು
ಭವಿಷ್ಯವನ್ನರಸಿ ಹೋಗುವ
ಮಕ್ಕಳಂತೆ, ಆದರೂ
ಒಂಟಿಯಲ್ಲ ಕಪ್ಪುಕೊಡೆ
ಅವನೊಡೆಯನಿದ್ದಾನಲ್ಲ! ಭಗವಂತನಂತೆ

● **ಎಂ. ಶಾಂತಕುಮಾರಿ**

# ಚಿಂತೆ ಬಿಡು ಗೆಳೆಯ

ಬಿಸಿಲೇನು ಮಳೆಯೇನು?
ತಲೆ ಕಾಯಲು ಬಂದವ ನಾನು
ತೋಯ್ದರೇನು ಸುಟ್ಟರೇನು?
ನನ್ನ ಮಾರುವುದಕ್ಕೇ ತಂದವ ನೀನು
ಮತ್ತೆ ನನಗೇಕೆ ರಕ್ಷಣೆ?
ಸಿಕ್ಕರೆ ಸಾಕು ನಿನಗೆ ದಕ್ಷಿಣೆ!

ಹೋದರೆ ಹೋದೇನು ಬಿಡು ಗೆಳೆಯ
ನಿನಗೇಕೆ ಕಾಳಜಿ ಭಯ?
ನೆರಳ ಕೊಟ್ಟರೆ ಮರವಾದೆ
ಮಳೆಗೆ ಛಾವಣಿಯಾದೆ
ನನ್ನ ನಂಬಿದವರಿಗೆ
ನೀಡುವುದಷ್ಟೆ ಅಭಯ

ಬಗೆ ಬಗೆಯ ಬಣ್ಣ ಬಳಿದರೂ
ನಾ ಕಪ್ಪನೆಯ ನೆರಳೇ ಕೊಡುವೆ
ಬಳಸಿ ಮೂಲೆಗೆಸೆದರೂ
ಜನರ ಕಷ್ಟದಲ್ಲಿ ಅವರ ಬೆರಳೇ ಹಿಡಿವೆ

ಚಿಂತೆ ಬಿಡು ಗೆಳೆಯ
ತೋರಬೇಡ ನನ್ನ ಮೇಲೆ
ಇಷ್ಟೊಂದು ಕಾಳಜಿ
ನನಗೆ ಬಿಸಿಲೇನು ಮಳೆಯೇನು!
ತೋಯಲು ಬಂದವ ನಾನು
ಒದ್ದೆಯಾದರೇನು ಸುಟ್ಟರೇನು
ನನ್ನ ಮಾರುವುದಕ್ಕೇ ತಂದವ ನೀನು!

● **ಆರ್. ಸುನೀಲ್**